ಬದಲಿಗೆ ಜಿಲ್ಲಾ ಕಾರಾಗೃಹ ಆಗಬೇಕು ಎಂಬುವ ತೀರ್ಮಾನ ಆಗಿರುವುದರಿಂದ ಮಂಗಳೂರಿನ ಜಿಲ್ಲಾಧಿಕಾರಿಗಳಿಗೆ ಹೋದವಾರ ನಾನು ಈಗಾಗಲೇ ತಿಳಿಸಿದ್ದೇನೆ. ತಕ್ಷಣವೇ ಜಾಗವನ್ನು ಗುರುತಿಸಿ ಕೊಟ್ಟು ತಕ್ಷಣ ಅದನ್ನು ಮಾಡಬೇಕು ಎಂದು ಅಲ್ಲಿಯವರೆಗೆ ತಾವು ಒಂದು ಕಛೇರಿಯನ್ನು ಮಾಡಬೇಕಾಗುತ್ತದೆ ನಮಗೆ ಬಿಟ್ಟು ಕೊಡಿ ಎಂದು ಹೇಳಿದ್ದೀರಿ, ನಾನು ಮತ್ತೊಮ್ಮೆ ಈ ಸದನದ ಮಧ್ಯದಲ್ಲಿ ಯಾವಾಗಲಾದರೂ ಹೋದರೆ ನಮಗೆ ಬೇರೆ ಯಾವುದಾದರೂ ಸ್ಥಳಾಂತರ ಮಾಡುವುದಕ್ಕೆ ಜಾಗ ಕೊಡುವುದಾದರೆ ಆ ಜಾಗವನ್ನು ನಿಮಗೆ ಬಿಟ್ಟು ಕೊಡುತ್ತೇವೆ. ನಾವು ಕಟ್ಟಡ ಕಟ್ಟಬೇಕಾದರೆ ಅಲ್ಪಸ್ವಲ್ಪ ದಿನಗಳು ಆಗುವುದರಿಂದ ಜಿಲ್ಲಾ ಕಾರಾಗೃಹ ಆಗುವುದರಿಂದ ಏನು ಇವತ್ತು ಇರತಕ್ಕಂಥ ಕಾರಾಗೃಹವಿದೆ ಅದನ್ನು ನೀವು ಬೇರೆ ಕಡೆ ಕಛೇರಿ ಮಾಡ ಬೇಕಾದ ಅವಶ್ಯಕತೆ ಇರುವುದರಿಂದ ಬೇರೆ ಸಣ್ಣದಾಗಿರತಕ್ಕಂಥ ಒಂದು ಕಟ್ಟಡವನ್ನು ಒದಗಿಸಿಕೊಟ್ಟರೆನಾವು ತಕ್ಷಣ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಸಚಿವರು ಕನ್ವಿನ್ಸಿಂಗ್ ರಿಪ್ಲೈಯನ್ನು ಕೊಟ್ಟಿದ್ದಾರೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ ಆ ಕುರಿತು ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆಯು ಬಂದಿದೆಯೇ ಎಂಬುದಾಗಿದೆ.

ಶ್ರೀ ವಿ. ಸೋಮಣ್ಣ : ನಾವು ಪ್ರಸ್ತಾವನೆಯನ್ನು ತರಿಸಿಕೊಂಡು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಕೇಂದ್ರ ಕಾರಾಗೃಹವನ್ನು ಕೂಡ ಮಾಡುತ್ತೇವೆ.

ಅಧ್ಯಕ್ಷರು : ಹಾಗಾದರೆ ಸಭಾಪತಿಯವರಿಗೆ ಜಿಲ್ಲೆಯೂ ಆಯಿತು, ಜೈಲೂ ಆಯಿತು.

ವಿಷಯ : ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಕೃಪಾಂಕದ ಪ್ರಮಾಣ

249 (2113)-ಶ್ರೀ ಎ. ರಾಮದಾಸ. (ಕೃಷ್ಣರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯ ಸರ್ಕಾರದ ವಿವಿಧ ಹಂತದ ನೇಮಕಾತಿಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಈಗಿರುವ ಕೃಪಾಂಕದ ಪ್ರಮಾಣವೆಷ್ಟು

ಆ) ಈ ಕೃಪಾಂಕದ ಪ್ರಮಾಣವನ್ನು ಸರ್ಕಾರವು ಹೆಚ್ಚಿಸಲು ನಿರ್ಧರಿಸಿದೆಯೇ, ಹಾಗಿದ್ದಲ್ಲಿ, ಪ್ರತಿಶತ ಎಷ್ಟನ್ನು ಹೆಚ್ಚಿಸಲು ನಿರ್ಧರಿಸಿದೆ.

ಇ) ಇದು ಯಾವಾಗಿನಿಂದ ಜಾರಿಗೆ ಬರಲಿದೆ. ಪೂರ್ಣ ವಿವರ ನೀಡುವುದು

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು)

ಅ) ಶೇಕಡ 10

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ರಾಮದಾಸ : ಮಾನ್ಯ ಅಧ್ಯಕ್ಷರೇ, ಹಿಂದೆ ಇದ್ದಂಥ ಶೇಕಡ 5 ರಿಂದ 10 ಕ್ಕೆ ಕೃಪಾಂಕಗಳನ್ನು ಜಾಸ್ತಿ ಮಾಡಿರುವುದು ಎಂದಿನಿಂದ ಜಾರಿಗೆ ಬಂತು? ಈ ಕೃಪಾಂಕಗಳು ಹಿಂದೆ ಕೇವಲ ಸಿ ಮತ್ತು ಡಿ. ಗುಂಪಿನ ನೌಕರರಿಗೆ ಮಾತ್ರ ಅನ್ವಯ ಆಗುತ್ತಾ ಇತ್ತು, ಈಗ ಅದು ಎ ಮತ್ತು ಬಿ ಗುಂಪಿನ ನೌಕರರಿಗೂ ಅನ್ವಯವಾಗುತ್ತಾ ಇದೆಯೇ? ಅಂತೆಯೇ ಎಷ್ಟು ಜನಸಂಖ್ಯೆಯವರೆಗೆ ಇರುವ ಪಟ್ಟಣಗಳನ್ನು ಗ್ರಾಮಾಂತರ ಪ್ರದೇಶ ಎಂದು ಪರಿಗಣಿಸಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸ ಬೇಕೆಂದು ಕೇಳಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ಈ ಕೃಪಾಂಕಗಳನ್ನು ಶೇಕಡಾ 5 ರಿಂದ 10 ಕ್ಕೆ ಏರಿಸಿ, ಹಾಗೂ 25 ಸಾವಿರ ಪ್ರಜಾಸಂಖ್ಯೆ ಎಂದು ಇರುವುದನ್ನು 50 ಸಾವಿರ ಪ್ರಜಾಸಂಖ್ಯೆ ಎಂದು ಏರಿಸಿ ಅದನ್ನು ಗ್ರಾಮಾಂತರ ಎಂದು ಘೋಷಿಸಿ ಅದನ್ನು ಕನ್ಸಿಡರ್ ಮಾಡಬೇಕೆಂದು ಹೇಳಿ ಈಗಾಗಲೇ ಸರಕಾರಿ ಆಜ್ಞೆಯನ್ನು ಹೊರಡಿಸಿ ಅದನ್ನು ಜಾರಿಗೆ ತಂದಿದೆ. ಆ ಆಜ್ಞೆಯನ್ನು ಕರ್ನಾಟಕ ಆಡ್ಮಿನಿಸ್ಟ್ರೇಟಿವ್ ಟ್ರೈಬ್ಯೂನಲ್‌ನಲ್ಲಿ ಪ್ರಶ್ನೆಮಾಡಲಾಗಿದೆ. ಆದರೂ ಕೂಡ ಸದರಿ ಆಜ್ಞೆಯು ಜಾರಿಯಲ್ಲಿದೆ.

ಶ್ರೀ ಎ. ರಾಮದಾಸ : ಮಾನ್ಯ ಅಧ್ಯಕ್ಷರೇ, ಮೊದಲು ಈ ಕೃಪಾಂಕಗಳನ್ನು ಸಿ ಮತ್ತು ಡಿ ವರ್ಗದವರಿಗೆ ಮಾತ್ರ ಅಳವಡಿಸಲಾಗುತ್ತಿತ್ತು. ಈಗ ಅದನ್ನು ಎ ಮತ್ತು ಬಿ ವರ್ಗದವರಿಗೆ ಅನ್ವಯ ಮಾಡುತ್ತೀರಾ ಹಾಗೂ ಯಾವ ಸಾಲಿನ ಸೆನ್ಸಸ್‌ನ ಆಧಾರದ ಮೇಲೆ ಗ್ರಾಮಾಂತರ ಪ್ರದೇಶಗಳಿಂದು ಪರಿಗಣನೆ ಮಾಡಿದ್ದೀರಿ?

ಶ್ರೀ ಜೆ. ಹೆಚ್. ಪಟೇಲ್ : ಈಗ ಈ ಕೃಪಾಂಕಗಳನ್ನು ಎ ಮತ್ತು ಬಿ ವರ್ಗದವರಿಗೂ ಅನ್ವಯ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶಗಳಿಂದು ಪಟ್ಟಣಗಳನ್ನು 1991ರ ಸೆನ್ಸಸ್‌ನ ಆಧಾರದ ಮೇಲೆ ಮಾಡಿದ್ದೇವೆ.

ಅಧ್ಯಕ್ಷರು : ಶ್ರೀ ಮಾಧುಸ್ವಾಮಿಯವರು ಉಪ-ಪ್ರಶ್ನೆಯನ್ನು ಕೇಳಬೇಕೆಂದು ನನಗೆ ಪತ್ರ ಬರೆದು ಕೇಳಿಕೊಂಡಿದ್ದೀರಿ. ಉಪ ಪ್ರಶ್ನೆಯನ್ನು ಕೇಳಬಹುದು.

ಶ್ರೀ ಜಿ. ಸಿ. ಮಾಧುಸ್ವಾಮಿ : ಸ್ಪಷ್ಟೀಕರಣ ನೀಡಿರುವುದರಿಂದ ನಾನು ಉಪ ಪ್ರಶ್ನೆ ಕೇಳುವುದಿಲ್ಲ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರತಕ್ಕ ಬಾಕಿ

250 (2103)-ಶ್ರೀ ಯು. ಬಿ. ಬಣಕಾರ (ಹಿರೇಕೆರೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಗಯವಿಟ್ಟು ಉತ್ತರಿಸುವರೆ

ಅ) ವಿವಿಧ ರೀತಿಯ ಗ್ರಾಹಕದಿಂದ 31-3-97ಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರತಕ್ಕ ಬಾಕಿ ಎಷ್ಟು

ಆ) ಈ ಬಾಕಿ ವಸೂಲಾತಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು)

ಅ) ವಿವಿಧ ರೀತಿಯ ಗ್ರಾಹಕರುಗಳಿಂದ 31-3-97ಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರತಕ್ಕ ಬಾಕಿ ಮೊತ್ತ ರೂ. 999.39 ಕೋ. ರೂ (ವಿವರಗಳು ಅನುಬಂಧ -1ರಲ್ಲಿ ಲಗತ್ತಿಸಲಾಗಿದೆ).

ಆ) ಬಾಕಿ ವಸೂಲಾತಿಯ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ತೀವ್ರವಾಗಿ ಪರಿಗಣಿಸಿ. ವಸೂಲಾತಿ ಮಾಡಲು ಈ ಕೆಳಕಂಡಂತೆ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಅ) ಮಾಸಿಕ ಗುರಿಯನ್ನು ನಿಗಧಿಪಡಿಸಲಾಗಿದೆ ಮತ್ತು ಶಕ್ತಿಪೂರ್ಣವಾಗಿ ಪರಿಶೀಲಿಸುತ್ತಿದೆ.

ಆ) ಈ ಸಂಸ್ಥೆಗಳ ಭಾಗಶಃ ಅನುಧಾನವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬಾಕಿ ಹಣದ ಬಗ್ಗೆ ಹೊಂದಾಣಿಕೆಯನ್ನು ಮಾಡಲು ಸರ್ಕಾರವು ಕ್ರಮತೆಗೆದುಕೊಳ್ಳಲಾಗುತ್ತಿದೆ.

ಇ) ಮೇಲ್ಮನವಿಗಳನ್ನು ಅತಿ ಜಾಗ್ರತೆಯಾಗಿ ಇತ್ಯರ್ಥಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಕೆಳ ಹಂತದ ನ್ಯಾಯಾಲಯಗಳ ಮುಂದಿರುವ ಪ್ರಕರಣಗಳನ್ನು ಬಲವಾಗಿ ನಿಗಾವಹಿಸಲಾಗುತ್ತದೆ.

ಉ) ಅಧಿಕ ಹಣ ಬಾಕಿ ಇರುವ ಬಳಕೆದಾರರಿಗೆ ವಿದ್ಯುತ್ ಕಡತಗೊಳಿಸಲು ನೋಟೀಸ್ ನೀಡಲಾಗಿದೆ.